# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 893
ಸದಸ್ಯರ ಹೆಸರು : ಶ್ರೀ ಎಂ. ನಾರಾಯಣಸ್ವಾಮಿ
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 18-12-2018

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ವತಿಯಿಂದ ಪ್ರತಿ ಹಳ್ಳಿಗಳಿಗೆ ನಿಗದಿತ ಸಮಯಕ್ಕೆ ಸರ್ಕಾರಿ ಬಸ್ಸುಗಳು ಹೋಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣಗಳೇನು; | ಸಾರಿಗೆ ಸಂಸ್ಥೆಗಳ ವತಿಯಿಂದ ಕಾರ್ಯಾಚರಣೆ ಮಾಡಲಾಗುತ್ತಿರುವ ಅನುಸೂಚಿ ಸಾರಿಗೆಗಳನ್ನು ಪ್ರತಿ ಹಳ್ಳಿಗಳಿಗೆ ನಿಗದಿತ ಸಮಯಕ್ಕೆ ಕಾರ್ಯಾಚರಣೆ ಮಾಡಲಾಗುತ್ತಿದೆ.<br>ಆದಾಗ್ಯೂ ಈ ಕುರಿತಂತೆ ಸಮಯಕ್ಕೆ ಸರಿಯಾಗಿ ಬಸ್ ಕಾರ್ಯಾಚರಣೆಯಾಗದೆ ಇರುವ ಬಗ್ಗೆ ನಿರ್ದಿಷ್ಟ ದೂರು/ ಸಲಹೆಗಳು ಬಂದಲ್ಲಿ ಅವುಗಳನ್ನು ಪರಿಶೀಲಿಸಿ ಸಾರಿಗೆಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಕಾರ್ಯಾಚರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ) | ಸರ್ಕಾರಿ ಬಸ್ಸುಗಳು ಹೋಗುವ ಸಮಯಕ್ಕೆ ಅಧಿಕಾರಿಗಳು ಖಾಸಗಿ ಬಸ್ ಮಾಲೀಕರ ಜೊತೆ ಒಳ ಒಪ್ಪಂದ ಮಾಡಿಕೊಂಡು ಅದೇ ಸಮಯದಲ್ಲಿ ಖಾಸಗಿ ಬಸ್ಸುಗಳು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅಂತರರಾಜ್ಯ ಹಾಗೂ ರಾಷ್ಟ್ರೀಕೃತವಲ್ಲದ ಮಾರ್ಗಗಳಲ್ಲಿ ಸಾರಿಗೆ ಸಂಸ್ಥೆಗಳು ಅಧಿಕೃತ ಪರವಾನಗಿಗಳನ್ನು ಸಾರಿಗೆ ಪ್ರಾಧಿಕಾರಗಳಿಂದ ಪಡೆದು ಪರವಾನಗಿಯಲ್ಲಿನ ವೇಳಾಪಟ್ಟಿಯಂತೆ ಆಚರಣೆ ಮಾಡಲಾಗುತ್ತಿದೆ. ಸರ್ಕಾರಿ ಬಸ್ಸುಗಳು ಹೋಗುವ ಸಮಯಕ್ಕೆ ಅಧಿಕಾರಿಗಳು ಯಾವುದೇ ಒಳ ಒಪ್ಪಂದ ಮಾಡಿಕೊಂಡಿರುವುದಿಲ್ಲ. |
| ಇ) | ರಾಜ್ಯದಲ್ಲಿ ಓಡಾಡುತ್ತಿರುವ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಓಡಾಡುತ್ತಿರುವ ಖಾಸಗಿ ಮಜಲು ವಾಹನಗಳ ಸಂಖ್ಯೆ 7364.<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಈ) | ಖಾಸಗಿ ಬಸ್ ಮಾಲೀಕರ ಜೊತೆ ಒಳ ಒಪ್ಪಂದ ಮಾಡಿಕೊಂಡಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; | ಖಾಸಗಿ ಬಸ್ ಮಾಲೀಕರ ಜೊತೆ ಒಳ ಒಪ್ಪಂದ ಮಾಡಿಕೊಂಡಿರುವ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಉ) | ಮಂಡ್ಯ ಜಿಲ್ಲೆಯಲ್ಲಿ ದಿನಾಂಕ 25.11.2018ರಂದು ಖಾಸಗಿ ಬಸ್‌ನಿಂದ 30 ಜನ ಪ್ರಯಾಣಿಕರ ಪ್ರಾಣ ಕಳೆದುಕೊಂಡ ದುರಂತಕ್ಕೆ ಕಾರಣವೇನು; ಪ್ರಾಣ ಕಳೆದುಕೊಂಡ ಪ್ರಯಾಣಿಕರಿಗೆ ಸರ್ಕಾರ ಯಾವ ರೀತಿಯಲ್ಲಿ ಪರಿಹಾರ ನೀಡುತ್ತದೆ? (ವಿವರ ನೀಡುವುದು) | ಚಾಲಕನ ಅಜಾಗರೂಕತೆಯ ಚಾಲನೆ, ರಸ್ತೆ ಮತ್ತು ಕಾಲುವೆಯ ಮಧ್ಯೆ ತಡೆಗೋಡೆ ಇಲ್ಲದಿರುವುದು, ಇಳಿಜಾರು ರಸ್ತೆ ಹಾಗೂ ರಸ್ತೆಯಲ್ಲಿ ಗುಂಡಿಗಳು (Pot Holes) ಇರುವುದು ದುರಂತಕ್ಕೆ ಕಾರಣವಾಗಿರುತ್ತದೆ.<br>ಪ್ರಾಣ ಕಳೆದುಕೊಂಡ 30 ಜನ ಪ್ರಯಾಣಿಕರ ವಾರಸುದಾರರಿಗೆ ತಲಾ ರೂ.5.00 ಲಕ್ಷ ಪರಿಹಾರ ನೀಡಲಾಗಿರುತ್ತದೆ. |

ಸಾಇಇ 190 ಸಾಸಂಪ್ರ 2018

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು

# ಅನುಬಂಧ

## ರಾಜ್ಯದ ವಿವಿಧ ಪ್ರಾದೇಶಿಕ ಹಾಗೂ ರಾಜ್ಯ ಸಾರಿಗೆ ಪ್ರಾಧಿಕಾರಗಳಿಂದ ಮಜಲು ವಾಹನಗಳಿಗೆ ನೀಡಿರುವ ರಹದಾರಿಗಳ ವಿವರಗಳು

| ಕ್ರ. ಸಂ. | ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಹೆಸರು | ರಹದಾರಿ ನೀಡಲಾದ ಸಂಖ್ಯೆಗಳು |
|---|---|---|
| 1 | ಬೆಂಗಳೂರು (ನಗರ) | 9 |
| 2 | ಬೆಂಗಳೂರು (ಗ್ರಾಮಾಂತರ) | 253 |
| 3 | ತುಮಕೂರು | 589 |
| 4 | ರಾಮನಗರ | 336 |
| 5 | ಕೋಲಾರ | 98 |
| 6 | ಚಿಕ್ಕಬಳ್ಳಾಪುರ | 85 |
| 7 | ಮೈಸೂರು (ಪಶ್ಚಿಮ) | 217 |
| 8 | ಚಾಮರಾಜನಗರ | 180 |
| 9 | ಮಂಡ್ಯ | 477 |
| 10 | ಮಡಿಕೇರಿ | 161 |
| 11 | ಶಿವಮೊಗ್ಗ | 695 |
| 12 | ಮಂಗಳೂರು | 985 |
| 13 | ಉಡುಪಿ | 333 |
| 14 | ಚಿತ್ರದುರ್ಗ | 352 |
| 15 | ದಾವಣಗೆರೆ | 608 |
| 16 | ಚಿಕ್ಕಮಗಳೂರು | 361 |
| 17 | ಧಾರವಾಡ (ಪಶ್ಚಿಮ) | 60 |
| 18 | ಹಾವೇರಿ | 15 |
| 19 | ಬಳ್ಳಾರಿ /ಹೊಸಪೇಟೆ | 126 |
| 20 | ಕೊಪ್ಪಳ | 23 |
| 21 | ರಾಜ್ಯ ಸಾರಿಗೆ ಪ್ರಾಧಿಕಾರ | 1401 |
| | ಒಟ್ಟು | **7364** |